ಓ.ಎಸ್.238/2011 7 ನೇ ಪ್ರತಿವಾದಿ/ಡಿ.ಡಬ್ಲು-4
ಸತ್ಯಪ್ಪ ತಂದೆ ದುರಗಪ್ಪ ವಡ್ಡರ

ದಿ. 15-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : *3, 6 (ಬಿ)* ಮತ್ತು *(ಸಿ)*, ರವರ ಪರ ವಕೀಲರಾದ ಶ್ರೀ ವಿ.ಪಿ.ಎಸ್.ಜೆ ರವರಿಂದ:-**

ನಿಮ್ಮ ಮನೆತನದ ಮೂಲ ಕಸಬು ಏನೆಂದರೆ ಸಾಕ್ಷಿಯು ಒಕ್ಕಲುತನ ಎಂದು ನುಡಿಯುತ್ತಾರೆ. ಒಕ್ಕಲುತನ ಬಿಟ್ಟು ಬೇರೆ ಉದ್ಯೋಗ ಮಾಡುವುದಿಲ್ಲ. ತಮ್ಮ ಮನೆತನಕ್ಕೆ ಮೊದಲಿನಿಂದಲು ಎಷ್ಟು ಜಮೀನುಗಳಿವೆ ಎಂದರೆ ಸಾಕ್ಷಿಯು ಮೊದಲಿನಿಂದ ಯಾವುದೇ ಜಮೀನು ಇರುವುದಿಲ್ಲ ಈಗ ನಾನೇ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಮನೆತನಕ್ಕೆ ವ್ಯವಸಾಯದ ಆದಾಯ ಹೊರತುಪಡಿಸಿ ಬೇರೆ ಆದಾಯ ಇಲ್ಲ ಎಂದರೆ ಸರಿ. ನಿಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಜಮೀನುಗಳನ್ನು ಖರೀದಿಸಿದ ಹೊರತು ಬೇರೆ ಜಮೀನುಗಳನ್ನು ಖರೀದಿ ಮಾಡಿದ ಬಗ್ಗೆ ಬರೆಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಬೇರೆ ಜಮೀನುಗಳು ಅಥವಾ ಮನೆಗಳು ಮತ್ತು ಆದಾಯದ ಬಗ್ಗೆ ನಿಮ್ಮ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಹೋದರರ ಮಧ್ಯ ಪಾಲು ವಿಭಾಗದಲ್ಲಿ ಯಾವುದಾದರು ಆಸ್ತಿ ಬಂದಿರುತ್ತವೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನೀವು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-13 ರಂತೆ ದಿ : 04-09-2023 ರಂದು ಖರೀದಿ ಕರಾರು ಪತ್ರವನ್ನು ರದ್ದುಪಡಿಸಿದಾಗ ಹಣವನ್ನು ಯಾವ ರೂಪದಲ್ಲಿ ಪಡೆದಿರುತ್ತಿರಿ ಎಂದರೆ ಸಾಕ್ಷಿಯು ನಗದು ರೂಪದಲ್ಲಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-13 ರಲ್ಲಿ ನಗದು ರೂಪದಲ್ಲಿ ನೀಡಿದ ಬಗ್ಗೆ ನಿಡಿ-13 ರಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಬರೆದಿರುವುದಿಲ್ಲ ಆದರೆ ನಗದಾಗಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ದಿ: 31-08-2016 ರಂದು ಎಷ್ಟು ಮೊತ್ತಕ್ಕೆ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಿರಿ ಎಂದರೆ ಸಾಕ್ಷಿಯು ರೂ.10,50,000/- (ಹತ್ತು ಲಕ್ಷ ಐವತ್ತು ಸಾವಿರ) ಎಂದು ನುಡಿಯುತ್ತಾರೆ. ಸದರಿ ಹಣವನ್ನು ಯಾವ ರೂಪದಲ್ಲಿ ನೀಡಿರುತ್ತಿರಿ ಎಂದರೆ ಸಾಕ್ಷಿಯು ನಗದು ರೂಪದಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-13 ರದ್ದತಿ ಪತ್ರದ ದಿನಾಂಕದಂದು ರವಿ ಮತ್ತು ರಾಜು ಎರಡು ಖರೀದಿ ಪತ್ರಗಳನ್ನು

ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ-4 ಮತ್ತು 5 ನೊಂದಣಿ ಮಾಡುವ ಸಮಯದಲ್ಲಿ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-4 ಮತ್ತು 5 ರಲ್ಲಿನ ಕೊನೆ ಪುಟದಲ್ಲಿನ ಚನ್ನಮ್ಮ ತಾಯಿ ಮುದ್ದಮ್ಮ ರವರ ಮುಂದಿರುವ ಛಾಯಚಿತ್ರವನ್ನು ತೋರಿಸಲಾಗಿ ಸರಿ ಇದೆ ಎಂದು ನುಡಿಯುತ್ತಾರೆ. ಸದರಿ ಚನ್ನಮ್ಮ ರವಿ ವಾದಿಯರ ತಾಯಿ ಎಂದರೆ ಸರಿ. ನಿಡಿ-6 ರಲ್ಲಿ ಚೆನ್ನಮ್ಮ ಗಂಡ ಶ್ಯಾಮಸುಂದರ ಎಂದು ನಮೂದಿದೆ ಆದರೆ ಆಕೆಯ ಆಧಾರಕಾರ್ಡ ಮತ್ತು ಇತರೆ ದಾಖಲೆಗಳಲ್ಲಿ ಚನ್ನಮ್ಮ ತಾಯಿ ಮುದ್ದಮ್ಮ ಎಂದು ನಮೂದಿದೆ ಎಂದರೆ ಸಾಕ್ಷಿಯು ಚನ್ನಮ್ಮ ಗಂಡ ಶ್ಯಾಮಸುಂದರ ಸರಿ ಆದರೆ ಚನ್ನಮ್ಮ ತಾಯಿ ಮುದ್ದಮ್ಮ ತಪ್ಪು ಎಂದು ನುಡಿಯುತ್ತಾರೆ. ನಿಡಿ-4 ಮತ್ತು 5 ರಲ್ಲಿ ನಮೂದಾದ ಚನ್ನಮ್ಮ ತಾಯಿ ಮುದ್ದಮ್ಮ ವಾದಿಯರ ತಾಯಿ ಹೌದು ಅಥವಾ ಇಲ್ಲ ಎಂದರೆ ಹೌದು ಎಂದು ನುಡಿಯುತ್ತಾರೆ. ದಿ:31-08-2016 ರ ಸಮಯದಲ್ಲಿ ದಾವಾ ಜಮೀನುಗಳು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ರವಿ ತಂದೆ ಶ್ಯಾಮಸುಂದರ ರವರ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಗೆ 2022-23 ರ ಪಹಣಿ ಪತ್ರಿಕೆ ತೋರಿಸಲಾಗಿ ಅದರಲ್ಲಿ ಯಾರ ಹೆಸರು ಇದೆ ಎಂದರೆ ಸಾಕ್ಷಿಯು ಶ್ಯಾಮಸುಂದರ ತಂದೆ ರಾಮಚಂದ್ರಪ್ಪ ಎಂದು ಇದೆ ಎಂದು ನುಡಿಯುತ್ತಾರೆ. ದಾಖಲೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ಪಹಣಿ ಪತ್ರಿಕೆ ಮತ್ತು ಶಿರೋನಾಮೆ ಇಲ್ಲದ ವ್ಯಕ್ತಿಯಿಂದ ತಾವು ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಿರಿ ಎಂದರೆ ಸರಿಯಲ್ಲ. ನಿಡಿ-4 ರಿಂದ 6 ಇವುಗಳಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ ಇದ್ದಲ್ಲಿ ಬಗೆಹರಿಸಿಕೊಡುವ ಜವಾಬ್ದಾರಿ ಪತ್ರವನ್ನು ಬರೆದುಕೊಡುವವರ ಮೇಲೆ ಇರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ನಿಡಿ-4 ರಿಂದ 6 ಇವುಗಳಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದಿಲ್ಲ ಎಂದು ಬರೆದಿರುತ್ತದೆ ಎಂದರೆ ಸರಿ. ನಿಮ್ಮ ಸ್ವಂತ ಊರು ಯಾವುದು ಎಂದರೆ ಸಾಕ್ಷಿಯು ಮುದಗಲ ಎಂದು ನುಡಿಯುತ್ತಾರೆ. ವಾದಿಯರು ಮತ್ತು 5 ನೇ ಪ್ರತಿವಾದಿಯವರು ಮುದಗಲ ರವರೇ ಎಂದರೆ ಸರಿ. ವಾದಿಯರ ವಂಶಾವಳಿ ಬಗ್ಗೆ ತಿಳಿದಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-5 ಮತ್ತು 6 ರಂತೆ ಖರೀದಿ ಪತ್ರ ಬರೆಯಿಸಿಕೊಳ್ಳುವ ಸಂದರ್ಭದಲ್ಲಿ ಈ ದಾವೆ ಬಾಕಿ ಇದ್ದ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-5 ಮತ್ತು 6 ರಂತೆ ಖರೀದಿಸುವ ಮುನ್ನ ವಾದಿಯರ ಪರ ಅಥವಾ ವಿರೋದ ವ್ಯಾಜ್ಯಗಳು ಇದ್ದ ಬಗ್ಗೆ ನ್ಯಾಯಾಲಯ, ತಹಶೀಲ್ದಾರ ಕಚೇರಿ, ವಿಭಾಗಾಧಿಕಾರಿ ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಚಾರಿಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮುದಗಲ ಗ್ರಾಮದಲ್ಲಿ ವಾದಿಯರ ಮನೆ, 3 ನೇ ಪ್ರತಿವಾದಿ ಮನೆ ಹಾಗೂ ನಿಮ್ಮ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ಮನೆ ಬೇಗಂಪುರ ಪೇಟೆಯಲ್ಲಿ ಮತ್ತು

ವಾದಿಯರ ಮನೆ ವೆಂಕಟರಾಯ ಪೇಟೆ ಬರುತ್ತದೆ ಮತ್ತು 3 ನೇ ಪ್ರತಿವಾದಿಯ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 6 ಮತ್ತು 6 (ಬಿ ಮತ್ತು ಸಿ) ರವರ ಮನೆ ಎಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚನ್ನಮ್ಮ ಶ್ಯಾಮಸುಂದರನ ಹೆಂಡತಿ ಎಂದು ತೋರಿಸುವ ಸಲುವಾಗಿ ಯಾವುದಾದರು ದಾಖಲೆಗಳನ್ನು ವಾದಿಯರಿಗೆ ಕೇಳಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿಯರು ಶ್ಯಾಮಸುಂದರನ ಮಕ್ಕಳಲ್ಲ ಎಂದರೆ ಸರಿ. ನಿಡಿ-5 ಮತ್ತು 6 ರಲ್ಲಿನ ಸ್ವತ್ತುಗಳು ವಾದಿಯರ ಹಾಗೂ 5 ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಿಸದ ಆಸ್ತಿ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಶ್ಯಾಮಸುಂದರನ ಹೆಂಡತಿ ಪದ್ಮಾವತಿ ಮತ್ತು ಮಗ ರಮೇಶ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ ಸಂ:10/2021 ರಂತೆ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ವಿಠ್ಠಲದಾಸ, ರಾಧಾ, ರಮೇಶ, ರಾಮಣ್ಣ, ಶೇಖರಪ್ಪ, ದೊಡ್ಡವೆಂಕೋಬಾ ಹಾಗೂ ಶಾರದಾ ರವರನ್ನು ಪಕ್ಷಗಾರರೆಂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಮಾನ್ಯ ಸಹಾಯಕ ಆಯುಕ್ತರ ರವರ ಪರವಾನಿಗೆ ಇಲ್ಲದೆ ಯಾವುದೇ ತರಹದ ಬದಲಾವಣೆ ಮಾಡಲು ಬರುವುದಿಲ್ಲ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವೆ ಸಂ: 10/2021 ಹಾಗೂ ಈ ದಾವೆಯಲ್ಲಿನ ಆಸ್ತಿಗಳು ಒಂದೇ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವೆ ಸಂ: 10/2021 ರಂತೆ ಯಾರಿಗೆ ಎಷ್ಟು ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ರವಿ ತಂದೆ ಶ್ಯಾಮಸುಂದರವರಿಗೆ ಸ.ನಂ: 443/2/8, 2 ಎಕರೆ, ರಾಜು ತಂದೆ ಶ್ಯಾಮಸುಂದರ ಸ.ನಂ: 443/2/9 2 ಎಕರೆ ಹಾಗೂ ಚನ್ನಮ್ಮ ಗಂಡ ಶ್ಯಾಮಸುಂದರ ರವರಿಗೆ ಸ.ನಂ:443/2/5, 1 ಎಕರೆ 38 ಗುಂಟೆ ಬಂದಿರುತ್ತದೆ. ಆದರೆ ಯಾವ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಡಿಕ್ರಿಯನ್ನು ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದ 2 ನೇ ಕಂಡಿಕೆಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ವಾದಿಯರ ಸಹ ಸಂಬಂಧಿ ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಅಸಲು ದಾವೆ ಸಂ:10/2021 ರಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯವರು ದಾವಾ ಆಸ್ತಿಗಳನ್ನು ಮಾರಾಟ ಮಾಡದಂತೆ ಮಧ್ಯಂತರ ಅರ್ಜಿ ಸಲ್ಲಿಸಿ ಆದೇಶ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಮತ್ತು 5 ನೇ ಪ್ರತಿವಾದಿಯವರೊಂದಿಗೆ ಶ್ಯಾಮಿಲಾಗಿ ನ್ಯಾಯಾಲಯದ ಆದೇಶವಿದ್ದರೂ ಕೂಡ ಖರೀದಿಸಿರುತ್ತಿರಿ ಎಂದರೆ ಸರಿಯಲ್ಲ. ವಾದಿಯರ ಮತ್ತು 5 ನೇ ಪ್ರತಿವಾದಿಯ ಹೆಸರುಗಳು ಪಹಣಿ ಪತ್ರಿಕೆ ಯಲ್ಲಿ ನಮೂದಾಗಿರುವ ಕಾರಣ ತಾವು ನಿಡಿ-5 ಮತ್ತು 6 ರಂತೆ

ಖರೀದಿಸಿರುತ್ತಿರಿ ಎಂದರೆ ನನಗೆ ಗೊತ್ತಿಲ್ಲ. ಶ್ಯಾಮಸುಂದರ ರವರಿಗೆ ತಿಪ್ಪಮ್ಮ ಮತ್ತು ಶಾವಮ್ಮ ಎನ್ನುವ ತಂಗಿಯರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಶ್ಯಾಮಸುಂದರನಿಗೆ ರಮೇಶ ಎನ್ನುವ ಮಗನಿದ್ದು ಆತನನ್ನು ಬಿಟ್ಟು ಬೇರೆಯಾರು ಇರಲಿಲ್ಲ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿ, ವಾದಿಯರ ಪರವಾಗಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕು ಬಿಟ್ಟು ಪತ್ರ ಬರೆದ ಬಗ್ಗೆ ತಮಗೆ ಮಾಹಿತಿ ಇದೆಯೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.  ದಾವಾ ಆಸ್ತಿಯ ಶ್ಯಾಮಸುಂದರವರ ಒಟ್ಟು ಕುಟುಂಬದ ಆಸ್ತಿ, ವಾದಿಯರು ಹಾಗೂ 5 ನೇ ಪ್ರತಿವಾದಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ: 443/1, 443/2, 443 ಇವುಗಳನ್ನು ಬಾಯಿ ಮಾತಿನ ಮೂಲಕ ವಿಭಾಗವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವು ಖರೀದಿ ಮಾಡಿದಾಗ ನಿಡಿ-5 ಮತ್ತು 6 ರಲ್ಲಿ ಹೇಳಲಾದ ಜಮೀನುಗಳ ಪ್ರತಿ ಎಕರೆಗೆ ಮಾರ್ಕೆಟ ಬೆಲೆ ಎಷ್ಟು ಇತ್ತು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಖರೀದಿಸಿದ ಭೂಮಿ ಗ್ರ್ಯಾನೆಟ ಭೂಮಿ ಎಂದರೆ ಸಾಕ್ಷಿಯು ಕೃಷಿ ಭೂಮಿ ಎಂದು ನುಡಿಯುತ್ತಾರೆ. ನೀವು ಖರೀದಿಸಿದ ಭೂಮಿಗಳು ಕೃಷಿ ಭೂಮಿಯೋ ಅಥವಾ ಗ್ರ್ಯಾನೆಟ ಭೂಮಿ ಎಂದು ನ್ಯಾಯಾಲಯದ ಮೂಲಕ ಪರಿಶೀಲಿಸಲು ನಿಮ್ಮ ತಕರಾರು ಇಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು 2 ನೇ ವಾದಿಯವರು ವ್ಯಾಜ್ಯಗಳಿರುವ ಜಮೀನುಗಳನ್ನು ಖರೀದಿ ಮಾಡಿ ಮಾರಾಟ ಮಾಡುವ ದಂಧೆ ಮಾಡುತ್ತಿರಿ ಎಂದರೆ ಸರಿಯಲ್ಲ. ಯಾವುದೇ ಹಣ ನೀಡದೆ ನಿಡಿ-5 ಮತ್ತು 6 ರಂತೆ ಆಸ್ತಿಗಳನ್ನು ಖರೀದಿಸಿರುತ್ತಿರಿ ಎಂದರೆ ಸರಿಯಲ್ಲ. 2 ನೇ ವಾದಿ ನಿಮ್ಮ ಸ್ನೇಹಿತ ಆಗಿರುವುದರಿಂದ ಈ ದಾವೆಯನ್ನು ಅವರೊಂದಿಗೆ ಶ್ಯಾಮಿಲಾಗಿ ಖೊಟ್ಟಿ ಆಗಿ ಹೂಡಿರುತ್ತಿರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.